## ಡಿಸಿಇಟಿ–2022 ರ ಸೀಟು ಹಂಚಿಕೆಗೆ ಅರ್ಹಗೊಳ್ಳಲು ಮೂಲ ದಾಖಲೆಗಳನ್ನು ಸಿದ್ದವಾಗಿಟ್ಟುಕೊಳ್ಳುವ ಬಗ್ಗೆ

ಡಿಸಿಇಟಿ–2022ನೇ ಸಾಲಿಗೆ ದಾಖಲಾತಿ ಪರಿಶೀಲನೆಯ ವೇಳಾಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಸದ್ಯದಲ್ಲಿಯೇ ಪ್ರಕಟಿಸಲಾಗುವುದು.

ಅಭ್ಯರ್ಥಿಗಳ ಅನುಕೂಲಕ್ಕಾಗಿ ಪ್ರಮಾಣಪತ್ರಗಳನ್ನು ದಾಖಲೆಗಳನ್ನು ಸಿದ್ದವಾಗಿಟ್ಟುಕೊಳ್ಳುವ ಬಗ್ಗೆ ಮಾಹಿತಿಯನ್ನು ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ. ಅಗತ್ಯವಿರುವ ಎಲ್ಲಾ ಮೂಲ ದಾಖಲಾತಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಿದ್ದವಾಗಿಟ್ಟುಕೊಳ್ಳುವುದು ಸೂಕ್ತ.

- ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ಸೀಟು ಹಂಚಿಕೆಯು ಅರ್ಹ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಸಲ್ಲಿಸುವ ದಾಖಲಾತಿಗಳು / ಪ್ರಮಾಣ ಪತ್ರಗಳನ್ನು ಅವಲಂಬಿಸಿರುತ್ತದೆ.
- ಈ ಹಿನ್ನಲೆಯಲ್ಲಿ ಅಭ್ಯರ್ಥಿಗಳು ತಾವು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ವಿವರಗಳಿಗೆ ಅನುಗುಣವಾಗಿ ಮತ್ತು ಕ್ಲೇಮ್ ಮಾಡಿರುವ ಮೀಸಲಾತಿಯ ಅರ್ಹತೆಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರಗಳು ನೀಡುವ ದಾಖಲಾತಿಗಳನ್ನು ಪರಿಶೀಲನೆಗೆ ಒದಗಿಸಬೇಕಾಗುತ್ತದೆ..
- ಅಭ್ಯರ್ಥಿಗಳು ತಾವು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಕ್ಲೇಮುಗಳಿಗೆ ಅನುಗುಣವಾಗಿ ನಿಯಮಾನುಸಾರ ಪೂರಕವಾದ ಎಲ್ಲಾ ಮೂಲ ದಾಖಲೆಗಳನ್ನು / ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಿದ್ದವಾಗಿಟ್ಟುಕೊಳ್ಳಬೇಕು. ಜಾತಿ–ಆದಾಯ ಪ್ರಮಾಣ ಪತ್ರ / ದಾಖಲೆಗಳು / ಅಂಕಪಟ್ಟಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅಭ್ಯರ್ಥಿಯು ಅರ್ಹತೆಗೊಳ್ಳುವುದಿಲ್ಲ, ಹಾಗು ಸೀಟು ಆಯ್ಕೆಗೆ ತಮ್ಮ ಇಚ್ಛೆ (option) ಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಅವರನ್ನು ಪರಿಗಣಿಸುವುದಿಲ್ಲ.

  ಉದಾ:
  - ಅಭ್ಯರ್ಥಿಯು, 2ಎ ಪ್ರವರ್ಗ ಎಂದು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿ, ಸಂಬಂಧಿಸಿದ ತಹಸೀಲ್ದಾರ್ ರಿಂದ ಪಡೆದ ಚಾಲ್ತಿಯಲ್ಲಿರುವ 2ಎ ವರ್ಗದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸದಿದ್ದಲ್ಲಿ, ಅಂತಹ ಅಭ್ಯರ್ಥಿಯು 2ಎ ವರ್ಗದ ಮೀಸಲು ಪ್ರಯೋಜನವನ್ನು ಪಡೆಯಲು ಅರ್ಹನಾಗುವುದಿಲ್ಲ.
  - ಅಭ್ಯರ್ಥಿಯು ಕನ್ನಡ ಮಾಧ್ಯಮದಲ್ಲಿ ಓದಿರುವುದಕ್ಕೆ "YES" ಎಂದು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿ, ಒಂದರಿಂದ ಹತ್ತನೇ ತರಗತಿಯವರೆಗೆ (ಹತ್ತು ಪೂರ್ಣಾವಧಿ ವರ್ಷಗಳು) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದಕ್ಕೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸದಿದ್ದಲ್ಲಿ, ಕನ್ನಡ ಮಾಧ್ಯಮ ಮೀಸಲು ಪ್ರಯೋಜನವನ್ನು ಪಡೆಯಲು ಅರ್ಹನಾಗುವುದಿಲ್ಲ.
  - ಇದೇ ರೀತಿ ಯಾವುದೇ ಮೀಸಲಾತಿ ಪ್ರಯೋಜನವನ್ನು ಪಡೆಯಬೇಕಾದಲ್ಲಿ ಅಭ್ಯರ್ಥಿಯು ಸಂಬಂಧಿಸಿದ ನಿಗದಿತ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಅಭ್ಯರ್ಥಿಯು ಅಂತಹ ಮೀಸಲಾತಿ ಪ್ರಯೋಜನವನ್ನು ಪಡೆಯಲು ಅನರ್ಹಗೊಳ್ಳುತ್ತಾನೆ.

ಗಮನಿಸಿ:

- ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಅರ್ಹತಾ ಕಂಡಿಕೆಗೆ ಅನುಗುಣವಾಗಿ ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಪ್ರತಿಯೊಂದು ಅರ್ಹತಾ ಕಂಡಿಕೆ ಜೊತೆಯಲ್ಲಿ ನೀಡಲಾಗಿದೆ. (Eligibility Clauses)
- ಯಾವುದೇ ಮೀಸಲಾತಿ ಅರ್ಹತೆಯ ಸೌಲಭ್ಯವನ್ನು ಪಡೆಯಬೇಕಾದಲ್ಲಿ, ಡಿಸಿಇಟಿ–2022 ರ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರಬೇಕು ಮತ್ತು ಅದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಪಡೆದಿರಬೇಕು.

| ಕ್ರಮ ಸಂಖ್ಯೆ | ಸಿದ್ದಪಡಿಸಿಟ್ಟುಕೊಳ್ಳಬೇಕಾದ ದಾಖಲೆಗಳ ವಿವರ |
|---|---|
| 01 | ಡಿಸಿಇಟಿ–2022ಕ್ಕೆ ಭರ್ತಿ ಮಾಡಿ ಅಂತಿಮವಾಗಿ ಸಲ್ಲಿಸಿರುವ ಪ್ರತಿ. |
| 02 | "ಡಿಪ್ಲೊಮ ಸಾಮಾನ್ಯ ಪ್ರವೇಶ ಪರೀಕ್ಷೆ–2022" ರ ಮೂಲ ಪ್ರವೇಶ ಪತ್ರ |
| 03 | ಎಸ್‌ಎಸ್‌ಎಲ್‌ಸಿ/ 10ನೇ ತರಗತಿಯ ಅಂಕಪಟ್ಟಿ |
| 04 | ಡಿಪ್ಲೊಮ ಅಂಕಪಟ್ಟಿಗಳು ಎಲ್ಲಾ ಸೆಮಿಸ್ಟರ್ / ಎಲ್ಲಾ ವರ್ಷದ ಮೂಲ ಅಂಕಪಟ್ಟಿಗಳು |
| 05 | 7 ವರ್ಷದ ವ್ಯಾಸಂಗ ಪ್ರಮಾಣ ಪತ್ರ:<br>1 ರಿಂದ ಡಿಪ್ಲೊಮ ಅಂತಿಮ ವರ್ಷದವರೆಗೆ ಒಟ್ಟು 7 ವರ್ಷದ ವ್ಯಾಸಂಗ ಪ್ರಮಾಣಪತ್ರ (ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ / ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಮೇಲುರುಜು ಸಹಿ ಹೊಂದಿರುವ) ಎಸ್.ಎಸ್.ಎಲ್.ಸಿ. ಅಥವಾ ಡಿಪ್ಲೊಮ ಒಳಗೊಂಡಂತೆ.<br>7 ವರ್ಷದ ವ್ಯಾಸಂಗ ಪ್ರಮಾಣ ಪತ್ರದಲ್ಲಿ ಸಿಬಿಎಸ್‌ಸಿ / ಐಸಿಎಸ್‌ಸಿ ಅಭ್ಯರ್ಥಿಗಳಿಗೆ ಮೇಲುರುಜು ಅಗತ್ಯತೆ ಇರುವುದಿಲ್ಲ. |

ಮುಂದಿನ ದಾಖಲೆಗಳನ್ನು ''ಅನ್ವಯವಾಗುವಂತಿದ್ದ ಪಕ್ಷದಲ್ಲಿ ಮಾತ್ರ'' ಸಿದ್ದಪಡಿಸಿಟ್ಟುಕೊಳ್ಳಬೇಕು

| | |
|---|---|
| 06 | **ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ :**<br>1ನೇ ತರಗತಿಯಿಂದ 10ನೇ ತರಗತಿಯವರೆಗೆ ಹತ್ತು ಪೂರ್ಣಾವಧಿ ಶೈಕ್ಷಣಿಕ ವರ್ಷಗಳ ಕಾಲ ಕರ್ನಾಟಕದಲ್ಲಿ ಅಥವಾ ಕರ್ನಾಟಕ ರಾಜ್ಯದ ಹೊರಗಡೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಕನ್ನಡ ಮಾಧ್ಯಮ ಪ್ರಮಾಣಪತ್ರ ಸಿದ್ದಪಡಿಸಿಟ್ಟುಕೊಳ್ಳಬೇಕು. ಮುಂದಿನ ಪುಟಗಳಲ್ಲಿ ಪ್ರಮಾಣ ಪತ್ರಗಳ ವಿನ್ಯಾಸಗಳನ್ನು ನೀಡಲಾಗಿದೆ. |
| 07 | **ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ:**<br>ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಅಥವಾ ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರಲ್ಲಿ ಹೇಳಿರುವಂತೆ ಬೃಹತ್ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆಯ ಹಂತದಲ್ಲಿರುವ ಪ್ರದೇಶಗಳನ್ನು ಹೊರತುಪಡಿಸಿ, ಕರ್ನಾಟಕ ರಾಜ್ಯದಲ್ಲಿನ ಇತರ ಪ್ರದೇಶಗಳಲ್ಲಿ ಇರುವ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ, 10 ಪೂರ್ಣಾವಧಿ ಶೈಕ್ಷಣಿಕ ವರ್ಷಗಳವರೆಗೆ ವ್ಯಾಸಂಗ ಮಾಡಿರುವಂತಹ ಗ್ರಾಮೀಣ ವಿದ್ಯಾರ್ಥಿಗಳು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರ.<br>ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರದ ಜೊತೆಯಲ್ಲಿ ಪರಿಶೀಲನಾ ಪ್ರಮಾಣಪತ್ರ ವಿದ್ಯಾರ್ಥಿಗಳಿಗೆ ಮಾತ್ರ, ಮುಂದಿನ ಪುಟಗಳಲ್ಲಿ ಪ್ರಮಾಣ ಪತ್ರಗಳ ವಿನ್ಯಾಸಗಳನ್ನು ನೀಡಲಾಗಿದೆ. |
| 08 | **ಜಾತಿ ಪ್ರಮಾಣ ಪತ್ರ/ ಜಾತಿ ಮತ್ತು ಆದಾಯ ಪ್ರಮಾಣಪತ್ರ : (ಚಾಲ್ತಿಯಲ್ಲಿರುವ / Validity ಇರುವ)**<br>ಮೀಸಲಾತಿ ಪ್ರಯೋಜನಗಳನ್ನು ಕೋರುವುದಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರ/ ಜಾತಿ ಮತ್ತು ಆದಾಯ ಪ್ರಮಾಣಪತ್ರ / ಆದಾಯ ಪ್ರಮಾಣ ಪತ್ರಗಳು (ಅಧಿಕಾರವ್ಯಾಪ್ತಿಯಿರುವ ಸಂಬಂಧಪಟ್ಟ ತಹಸೀಲ್ದಾರ್‌ರವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗು ಇತರ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ ಮತ್ತು 3ಬಿ ಗಳಂತಹ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು)<br>ಅಲ್ಲದೆ, ಮೀಸಲು ಪ್ರವರ್ಗದಡಿಯಲ್ಲಿ ಸೀಟನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿರುವ ವಿದ್ಯಾರ್ಥಿಗಳು, ಅಧಿಕಾರವ್ಯಾಪ್ತಿಯ ತಹಸೀಲ್ದಾರ್‌ರವರು ನೀಡಿರುವ ಆದಾಯ ಪ್ರಮಾಣಪತ್ರ, ಬೋಧನ ಶುಲ್ಕ ಮರುಪಾವತಿ ಮತ್ತು ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಪ್ರಯೋಜನ ಪಡೆಯುವುದಕ್ಕಾಗಿ.<br>ಆದರೆ, ವಿದ್ಯಾರ್ಥಿ/ನಿ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ, ಮೀಸಲಾತಿ ಪ್ರಯೋಜನವನ್ನು ಕೋರಿದ್ದ ಪಕ್ಷದಲ್ಲಿ ಮಾತ್ರ ಅವರು ಜಾತಿ, ಪ್ರವರ್ಗ ಮತ್ತು ಆದಾಯದ ಸೌಲಭ್ಯಗಳನ್ನು ಕೋರಲು ಅರ್ಹರಾಗಿರುತ್ತಾರೆ. |

| | |
|---|---|
| 09 | 371 (ಜೆ)) – ಹೈದರಾಬಾದ್-ಕರ್ನಾಟಕ ಪ್ರದೇಶ ಮೀಸಲಾತಿ :<br>ಹೈದರಾಬಾದ್-ಕರ್ನಾಟಕ ಪ್ರದೇಶ ಮೀಸಲಾತಿ (ಅನುಚ್ಛೇದ 371 (ಜೆ))ಯನ್ನು ಕೋರುವ ವಿದ್ಯಾರ್ಥಿಗಳು, ಸಂಬಂಧಪಟ್ಟ ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಅವರು ಅನುಬಂಧ-ಎ (ಅರ್ಹತಾ ಪ್ರಮಾಣಪತ್ರ-ನಿಯಮ 3(3))ರಲ್ಲಿ ನೀಡಿರುವ ಪ್ರಮಾಣಪತ್ರ. |
| 10 | ತಂದೆ-ತಾಯಿ/ ಪೋಷಕರ, ವಾಸ ಸ್ಥಳ/ ವ್ಯಾಸಂಗ/ ಉದ್ಯೋಗದ ಆಧಾರದ ಮೇಲೆ ಸರ್ಕಾರಿ ಸೀಟುಗಳಿಗೆ ಸಂಬಂಧಿಸಿದಂತೆ ಅರ್ಹತೆಯನ್ನು ಕೋರುವ ವಿದ್ಯಾರ್ಥಿಗಳು, ಅವರ ತಂದೆ-ತಾಯಿ / ಪೋಷಕರ ವ್ಯಾಸಂಗ ಪ್ರಮಾಣಪತ್ರ/ ತಂದೆ-ತಾಯಿ/ ಪೋಷಕರ ಸ್ವಂತ ಪಟ್ಟಣ / ಸ್ವಂತ ಊರಿನ ಪ್ರಮಾಣಪತ್ರ/ ತಂದೆ-ತಾಯಿ/ಪೋಷಕರ ವಾಸಸ್ಥಳದ ಪ್ರಮಾಣಪತ್ರ / ತಂದೆ-ತಾಯಿ / ಪೋಷಕರ ಉದ್ಯೋಗ ಪ್ರಮಾಣಪತ್ರ / ತಂದೆ-ತಾಯಿ / ಪೋಷಕರ ಸಂಚಿತ ದಾಖಲೆ / ತಂದೆ-ತಾಯಿ / ಪೋಷಕರ ಅಂಕಪಟ್ಟಿ ಮೊದಲಾದವುಗಳು. |
| 11 | ಹೊರನಾಡು ಮತ್ತು ಗಡಿನಾಡು ಕನ್ನಡಿಗ ಕೋಟಾದ ಅಡಿಯಲ್ಲಿ ಅರ್ಹತೆಯನ್ನು ಕೋರುವಂತಹ ಅಭ್ಯರ್ಥಿಗಳು (ತಮ್ಮ ಮಾತೃ ಭಾಷೆ ಬಗ್ಗೆ) ಯುಕ್ತವಾಗಿ ಘೋಷಿಸಿರುವ ಅಫಿಡವಿಟ್ (ಖಂಡ ಸಿ & ಡಿ). |
| 12 | ಮಾನ್ಯತೆ ಇರುವ ನಾಟಾ ಪರೀಕ್ಷೆಯ ಅಂಕಪಟ್ಟಿ – ಆರ್ಕಿಟೆಕ್ಚರ್ ಕೋರ್ಸಿಗೆ ಮಾತ್ರ |

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಬೆಂಗಳೂರು

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್-04/2022 ದಿನಾಂಕ: 17-12-2022

**ಡಿಸಿಇಟಿ-2022 – ಫಲಿತಾಂಶ ಪ್ರಕಟಣೆ – 20-12-2022 ಸಂಜೆ 6.00 ರ ನಂತರ**

- ಎರಡನೇ ವರ್ಷದ / ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಾತಿಗೆ ಹಾಗು ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸಿಗೆ ಅರ್ಹತೆಯನ್ನು ಪಡೆಯುವುದಕ್ಕಾಗಿ ದಾಖಲಾತಿ ಪರಿಶೀಲನೆಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು.
- ಅಭ್ಯರ್ಥಿಗಳು, ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಈ ಕೆಳಗೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರ್ಗಿ, ಮಂಗಳೂರು, ದಾವಣಗೆರೆ, ಧಾರವಾಡ, ಶಿವಮೊಗ್ಗ, ಬಿಜಾಪುರ (ವಿಜಯಪುರ) ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಯು ಯಾವುದಾದರೂ ಸಹಾಯಕ ಕೇಂದ್ರದಲ್ಲಿ ಖುದ್ದಾಗಿ ಹಾಜರಿರಬೇಕು. **ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ.**
- ಈ ವೇಳಾಪಟ್ಟಿಯು ತಾತ್ಕಾಲಿಕ ಹಾಗು ಬದಲಾವಣೆಗೆ ಒಳಪಟ್ಟಿರುತ್ತದೆ. ಅಭ್ಯರ್ಥಿಗಳು ಆಗಿಂದಾಗ್ಗೆ ಪ್ರಾಧಿಕಾರದ ವೆಬ್‌ಸೈಟನ್ನು ಪರಿಶೀಲಿಸುತ್ತಿರಲು ಸೂಚಿಸಲಾಗಿದೆ.

**ಡಿಸಿಇಟಿ-2022 ದಾಖಲಾತಿ ಪರಿಶೀಲನೆಯ ವೇಳಾಪಟ್ಟಿ**

| ದಿನಾಂಕ | ಬೆಳಗಿನ ಅವಧಿ –1 ಬೆ.9.45 ರಿಂದ 11.30 ಹಾಜರಾಗುವ ಸಮಯ: ಬೆ. 9.30 ರ್‍ಯಾಂಕ್ ಸಂಖ್ಯೆಗಳು | | ಬೆಳಗಿನ ಅವಧಿ –2 ಬೆ.11.30 ರಿಂದ ಮ.1.15 ಹಾಜರಾಗುವ ಸಮಯ: ಬೆ. 11.00 ರ್‍ಯಾಂಕ್ ಸಂಖ್ಯೆಗಳು | | ಮಧ್ಯಾಹ್ನದ ಅವಧಿ –1 ಮ.2.00 ರಿಂದ ಮ.4.00 ಹಾಜರಾಗುವ ಸಮಯ: ಮ. 1.30 ರ್‍ಯಾಂಕ್ ಸಂಖ್ಯೆಗಳು | | ಮಧ್ಯಾಹ್ನದ ಅವಧಿ –2 ಸಂ.4.15 ರಿಂದ ಹಾಜರಾಗುವ ಸಮಯ: ಮ. 3.45 ರ್‍ಯಾಂಕ್ ಸಂಖ್ಯೆಗಳು | |
|---|---|---|---|---|---|---|---|---|
| | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ |
| ಮೈಸೂರು ಸಂಜೆ ಇಂಜಿನಿಯರಿಂಗ್ ಕಾಲೇಜುಗಳಿಗೆ (ಮೈಸೂರು ಕೇಂದ್ರದಲ್ಲಿ ಮಾತ್ರ) | | | | | | | | |
| 22-12-2022 | – | – | 1 | ಕೊನೆಯ ರ್‍ಯಾಂಕ್ | | – | – | – |
| ಬೆಂಗಳೂರು ಸಂಜೆ ಇಂಜಿನಿಯರಿಂಗ್ ಕಾಲೇಜುಗಳಿಗೆ (ಬೆಂಗಳೂರು ಕೇಂದ್ರದಲ್ಲಿ ಮಾತ್ರ) | | | | | | | | |
| 22-12-2022 | – | – | 1 | 300 | 301 | ಕೊನೆಯ ರ್‍ಯಾಂಕ್ | | |
| ಹಗಲು ಕಾಲೇಜುಗಳಿಗೆ (ಸಹಾಯಕ ಕೇಂದ್ರಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.) | | | | | | | | |
| 23-12-2022 | 1 | 600 | 601 | 1200 | 1201 | 1700 | 1701 | 2000 |
| 24-12-2022 | 2001 | 3200 | 3201 | 4400 | 4401 | 5600 | 5601 | 6000 |
| 26-12-2022 | 6001 | 7200 | 7201 | 8400 | 8401 | 9400 | 9401 | 10000 |
| 27-12-2022 | 10001 | 11500 | 11501 | 13000 | 13001 | 14500 | 14501 | 15000 |
| 28-12-2022 | 15001 | 17000 | 17001 | 18500 | 18501 | ಕೊನೆಯ ರ್‍ಯಾಂಕ್ | | |

ವಿದ್ಯಾರ್ಥಿಗಳು ದಾಖಲೆಗಳ ಪರಿಶೀಲನೆಗೆ ಬರುವ ಸಮಯದಲ್ಲಿ, ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲಾ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ತರಬೇಕು. ಪರಿಶೀಲನೆಯ ದಿನದಂದು ಯಾವುದೇ ದಾಖಲೆ / ಪ್ರಮಾಣಪತ್ರ / ಅಂಕಪಟ್ಟಿಯನ್ನು ಹಾಜರುಪಡಿಸಲು ಯಾರೇ ವಿದ್ಯಾರ್ಥಿ ವಿಫಲನಾದ ಪಕ್ಷದಲ್ಲಿ, ಅಂಥ ವಿದ್ಯಾರ್ಥಿಯ ದಾಖಲೆಗಳನ್ನು ಪರಿಶೀಲನೆ ಮಾಡುವುದಿಲ್ಲ ಮತ್ತು ಅವರ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಿಲ್ಲ. ಆನಂತರ ಅವರು ತಮ್ಮ ಇಚ್ಛೆ (option) ಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಅವರನ್ನು ಪರಿಗಣಿಸುವುದಿಲ್ಲ.

| Sl. No. | Option Entry Revised Schedule – First Round | |
|---|---|---|
| | **Particulars** | **Date and Time** |
| 01 | ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ | 26-12-2022 After 11.00 am |
| 02 | ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ) | From 7.00 pm 26-12-2022 to 29-12-2022 up to 11.00 am |
| 03 | ಅಣುಕು ಸೀಟು ಹಂಚಿಕೆಯ ಫಲಿತಾಂಶ | 29-12-2022 after 5.00 pm |
| 04 | ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಸೇರಿಸಿ / ಅಳಿಸಿ / ಬದಲಾಯಿಸಿ / ಮಾರ್ಪಡಿಸಿ) | From 8.00 pm on 29-12-2022 to 31-12-2022 up to 11.00 am |
| 05 | ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 31-12-2022 after 6.00 pm |
| 06 | ಸೀಟು ಹಂಚಿಕೆಯಾದ ಅಭ್ಯರ್ಥಿಗಳು Choice ಅನ್ನು ಆಯ್ಕೆ ಮಾಡಲು (ನಾಲ್ಕು Choice ಗಳಲ್ಲಿ ಸೂಕ್ತವಾದ Choice ಅನ್ನು ಆಯ್ಕೆ ಮಾಡಿ) | From 11.00 am 02-01-2023 to 03-01-2023 upto 11.59 pm |
| 07 | a. ಶುಲ್ಕ ಪಾವತಿ ಮಾಡುವುದು – Choice-1 and Choice-2 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಮಾತ್ರ<br>b. ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳುವುದು – Choice-1 ಅಭ್ಯರ್ಥಿಗಳಿಗೆ ಮಾತ್ರ – ಶುಲ್ಕ ಪಾವತಿಯ ನಂತರ | 03-01-2023 to 04-01-2023 (During Banking Hours) |
| 08 | Choice-1 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 05-01-2023 before 5.30 pm |

ದಾಖಲೆಗಳ ಪರಿಶೀಲನೆಯ ನಂತರ ಅರ್ಹರಾಗುವಂತಹ ವಿದ್ಯಾರ್ಥಿಗಳನ್ನು ಮಾತ್ರ, ಅವರು ತಮ್ಮ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ಪರಿಗಣಿಸಲಾಗುವುದು. ದಾಖಲಾತಿ ಪರಿಶೀಲನೆಗೆ **ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಡಿಸಿಇಟಿ-2022ರ ಇ-ಬ್ರೋಚರ್‌ನಲ್ಲಿ ಪ್ರಕಟಿಸಲಾಗಿದೆ.**

ಕಾರ್ಯನಿರ್ವಾಹಕ ನಿರ್ದೇಶಕರು